ಉ) ತೀರ್ಥಹಳ್ಳಿ ತಾಲ್ಲೂಕಿಗೆ ತುಂಗಾ ನದಿಯ ನೀರನ್ನು ಬಳಸಲು ಒತ್ತಾಯ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :- ಮಾನ್ಯ ಅಧ್ಯಕ್ಷರೇ, ನದಿಗಳ ದಡದಲ್ಲಿ ನಾಗರಿಕತೆ ಬೆಳೆಯುತ್ತದೆಂದು ಹೇಳುತ್ತಾರೆ. ಆದರೆ ಮಲನಾಡಿನಲ್ಲಿರುವಂತಹ ನಮಗೆ ನದಿಗಳು ಒಂದು ಸಮಸ್ಯೆಯಾಗಿ ಉಲ್ಬಣವಾಗಿದೆ. ಈ ನದಿಗಳಿಂದ ಏನು ಉಪಯೋಗವಿಲ್ಲ. ಅಷ್ಟು ಮಾತ್ರವಲ್ಲ. ಇದರಿಂದ ಉಪದ್ರವ ಜಾಸ್ತಿಯಾಗಿದೆ. ಪ್ರವಾಹದಲ್ಲಿ ಮುಳುಗಡೆಯಾಗುತ್ತಿದೆ. ಆಣೆಕಟ್ಟಿನಲ್ಲಿ ಮುಳುಗಡೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಶರಾವತಿ, ವರಾಹಿ, ಚಕ್ರ ಮತ್ತು ತುಂಗಾ ಮೇಲ್ದಂಡೆ ಆಣೆಕಟ್ಟು ಇವೆಲ್ಲವೂ ಕೂಡ ಬಂದು ಜಮೀನುಗಳು ಮತ್ತು ಮನೆಗಳನ್ನು ಕಳೆದುಕೊಂಡಿದ್ದಾರೆ. ನಾವು ಕಾಡನ್ನು ಕಳೆದುಕೊಂಡಿದ್ದೇವೆ. ಆದರೆ ತುಂಗಾ ಮೇಲ್ದಂಡೆ ಮತ್ತು ತುಂಗಾ ಏತ ನೀರಾವರಿ ಮತ್ತು ಇತ್ತೀಚೆಗೆ ತಾವು ಯೋಜನೆ ಮಾಡಿರುವ ತುಂಗಾ ಡೈವರ್ಷನ್ ಚಾನೆಲ್ ಇದರ ಪ್ರಕಾರ ತುಂಗಾ ನೀರನ್ನು ಮರು ಹಂಚಿಕೆ ಈಗಾಗಲೆ ಮಾಡುತ್ತಿದ್ದೀರಿ. ಇದು ನಾಳೆ ನಾಡಿದ್ದು ಪ್ರಸ್ತಾಪ ಆಗುತ್ತದೆಂದು ನಾನು ಕೇಳಿದ್ದೇನೆ. ಅದಕ್ಕಾಗಿ ನಾನು ಬೇರೆ ವಿಧದಲ್ಲಿ ತಮಗೆ ನೋಟೀಸ್ ಕೊಡುವುದಕ್ಕೆ ಆಗದೇ ಇರುವುದರಿಂದ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ತುಂಗ ನದಿ ದಡದಲ್ಲಿರುವಂತಹ ನಮ್ಮ ತೀರ್ಥಹಳ್ಳಿ ತಾಲ್ಲೂಕು ತುಂಗಾ ನದಿಯಲ್ಲಿರುವ ನೀರನ್ನು ನೋಡುತ್ತಿದ್ದೇವೆ. ಆದರೆ ರೈತರು ಆಕಾಶವನ್ನು ನೋಡಿ ಬೀಜವನ್ನು ಹೊಲಗಳಿಗೆ ಹಾಕುವಂತಹ ಪರಿಸ್ಥಿತಿಯಲ್ಲಿದ್ದಾರೆ. ಬಚಾವತ್ ಆಯೋಗದ ತೀರ್ಪಿನ ಪ್ರಕಾರ ತುಂಗಾ ಆಣೆಕಟ್ಟಿನ ಮೇಲ್ಭಾಗದಲ್ಲಿರುವಂತಹ ಈ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತುಂಗಾ ನದಿ ನೀರನ್ನು ಬಳಸುವುದಕ್ಕೆ ಆಗುತ್ತಿಲ್ಲ. ಚಿಕ್ಕ ಚಿಕ್ಕ ಏತ ನೀರಾವರಿಯನ್ನು ಮಂಜೂರು ಮಾಡಿದಾಗಲೂ ಕೂಡ ತಾಂತ್ರಿಕ ನೆವ ಹೇಳಿ ಅಧಿಕಾರಿಗಳು ಈಗಾಗಲೇ ರದ್ದು ಮಾಡುತ್ತಿದ್ದಾರೆ. ಕಾನೂನಿನ ಪ್ರಕಾರ ಇದನ್ನು ಬಳಸುವುದಕ್ಕೆ ಆಗುತ್ತಿಲ್ಲ, ಆದುದರಿಂದ ದಯಮಾಡಿ ಮರುಹಂಚಿಕೆ ಮಾಡುವಾಗ ಭದ್ರಾ ನದಿಗೆ ತುಂಗ ಏತ ನೀರಾವರಿಯ ಮೂಲಕ ಏನು ಹಾಯಿಸಿಕೊಳ್ಳುತ್ತಿದ್ದಾರೆ ಮತ್ತು ತುಂಗಾ ಏತ ನೀರಾವರಿಗೆ ಮತ್ತು ತುಂಗಾ ಮೇಲ್ದಂಡೆ ಯೋಜನೆಗೆ ರಿ-ಅಲೋಕೇಷನ್ ಏನು ಮಾಡುತ್ತಿದ್ದಾರೆ, ಈ ಹಂತದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಜನರಿಗೆ, ರೈತರಿಗೆ ಕನಿಷ್ಟ ಒಂದು ಟಿ.ಎಂ.ಸಿ. ನೀರನ್ನು ರಿಜರ್ವ್ ಆಗಿ ಇಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇದು ನಮ್ಮ ತಾಲ್ಲೂಕಿನ ರೈತರ ಜೀವನದ ಪ್ರಶ್ನೆಯಾಗಿದೆ. ಆದುದರಿಂದ ತಾವು ಇದನ್ನು ಪರಿಗಣಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :- ಮಾನ್ಯ ಅಧ್ಯಕ್ಷರೇ, 734 ಟಿ.ಎಂ.ಸಿ. ನೀರನ್ನು 1993 ರ ಮಾಡಿಫಿಕೇಷನ್ ಮಾಡಿ ಯಾವ್ಯಾವ ಪ್ರಾಜೆಕ್ಟ್‌ಗೆ ಎಷ್ಟೆಷ್ಟು ಉಪಯೋಗಿಸಿಕೊಳ್ಳಬೇಕೆಂಬ ಬಗ್ಗೆ ಸಿ.ಡಬ್ಲ್ಯೂ.ಸಿ.ಗೆ ಹೋಗಿದೆ.ತದ ನಂತರ ಉಳಿದ ನೀರಿನ ಬಗ್ಗೆ ಆಗಲೇ ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಜೇಷನ್‌ರವರಿಗೆ ಎಕ್ಸಾಮಿನ್ ಮಾಡಿ ಅಪ್ಪರ್ ತುಂಗಾಕ್ಕೆ ನಾನು ಈಗಾಗಲೇ ಲೀಫ್ಟ್ ಇರಿಗೇಷನ್ ಫೌಂಡೇಷನ್ ಹಾಕಿ ಕಮಿಟ್ ಆಗಿರುವಂತಹ 734 ಟಿ.ಎಂ.ಸಿ.ಯ ಬಗ್ಗೆ ಮತ್ತು ಎರಡನೆಯದಾಗಿ ಅಪ್ಪರ್ ತುಂಗಾಕ್ಕೆ ಬರುವಂತಹ ನೀರು, ಮತ್ತೆ ತುಂಗ ಡೈವರ್ಸನ್‌ಗೆ ಬೇಕಾಗುವಂತಹ ನೀರು ಅಪ್ಪರ್ ಭದ್ರಾಕ್ಕೆ ಅಚ್ಚುಕಟ್ಟಿಗಿರುವಂತಹ ನೀರು ಈ ನಾಲ್ಕನ್ನು ಪರಿಗಣಿಸಬೇಕೆಂದು ನಾನು ಎಕ್ಸಾಮಿನ್ ಮಾಡುವುದಕ್ಕೆ ಡಬ್ಲ್ಯೂ.ಆರ್.ಡಿ.ಗೆ ಹಾಕಿದ್ದೇವೆ. ಅವರು ಎಷ್ಟೆಷ್ಟು ನೀರು ದೊರೆಯುತ್ತದೆ, ಆಲೋಕೇಷನ್‌ಗೆ ಅಡ್ಜೆಸ್ಟ್ ಎಷ್ಟು ಮಾಡಬಹುದೆಂದು ಅವರು ಸ್ಟಡಿ ಮಾಡುತ್ತಿದ್ದಾರೆ. ಈ ನಾಲ್ಕು ಯೋಜನೆಯೊಳಗೆ

ತಾವು ಕೇಳಿರುವಂಥಾದ್ದನ್ನು ಹಾಕುತ್ತೇನೆ. ಅಪ್ಪರ್ ತುಂಗಾಕ್ಕೆ ಎಷ್ಟು ಬೇಕು, ತುಂಗಾ ಲಿಫ್ಟ್ ಇರಿಗೇಷನ್‌ಗೆ ಎಷ್ಟು ಬೇಕು. ತುಂಗ ಡೈವರ್ಷನ್‌ಗೆ ಎಷ್ಟು ಬೇಕು? ನಿಮ್ಮ ತಾಲ್ಲೂಕಿಗೆ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಎನ್ನುವಂಥಾದ್ದು ಈ ನಾಲ್ಕು ಪಾಯಂಟ್‌ನ್ನು ವಾಟರ್ ರಿಸೋರ್ಸಸ್ ಡೆವಲಪ್‌ಮೆಂಟ್ ಆರ್ಗನೈಜೇಷನ್‌ರವರಿಗೆ ರೇಫರ್ ಮಾಡಿ ಇಬ್ಬರು ಇಂಜಿನೀಯರ್ಸ್‌ಗಳನ್ನು ಕಳುಹಿಸಿ ಎಕ್ಸಾಮಿನ್ ಮಾಡಿಸಿ ಅದರ ಸಾಧ್ಯತೆಯ ಬಗ್ಗೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರಕ್ಕೆ ಸಂಬಂಧಪಟ್ಟಹಾಗೆ ಒಂದು ಪಾಯಿಂಟ್ ಕೇಳುತ್ತೇನೆ. ಮುಳುಗಡೆಯಾಗುವಂತಹ ಪ್ರದೇಶಗಳು ಅವುಗಳಲ್ಲಿ ಕೆಲವರ ಜಮೀನು ಅರ್ಧ ಮುಳುಗಡೆಯಾಗುತ್ತದೆ. ಕೆಲವರು ಅರ್ಧ ಉಳಿಯುತ್ತದೆ. ಹಿಂದೆ 1973 ನೇ ಇಸವಿಯಲ್ಲಿ ಮುಳುಗಡೆಯಾದಂತಹ ಅಚ್ಚುಕಟ್ಟು ಪ್ರದೇಶಗಳಲ್ಲಿ ಇರುವಂತಹ ಲಿಫ್ಟ್ ಆಗುವುದು ರೀಜನರೇಷನ್‌ಗೆ ಹೋಗುತ್ತದೆ. ಲಾಸ್ ಏನು ಆಗುವುದಿಲ್ಲ. ಈ ಒಂದು ಟಿ.ಎಂ.ಸಿ. ನೀರನ್ನು ನೀವು ಅಲ್ಲಿಗೆ ಕೊಡುತ್ತೀರೆಂದು ಇಟ್ಟುಕೊಳ್ಳಿ, ಅದರಲ್ಲಿ ಅರ್ಧವೂ ಖರ್ಚಾಗುವುದಿಲ್ಲ. ಎಲ್ಲಾ ಉಳಿದು ರಿ ಜನರೇಟ್ ಆಗಿ ಎಲ್ಲಾ ಅಲ್ಲಿಗೆ ಬರುತ್ತದೆ. ನೀವು ವಾಟರ್ ಸ್ಪ್ರೆಡ್ ಏರಿಯಾದಲ್ಲಿ ಕೊಡುವಂಥಾದ್ದು ಕಿಂಚಿತ್ತು ಅಷ್ಟೇ, it need not go to the entire account. As a policy matter you have to take decision wherever submersible area is there. ಒಂದು ಹಳ್ಳಿಯಲ್ಲಿ ಅರ್ಧ ಮುಳುಗಡೆ ಯಾಗುತ್ತದೆ, ಆಗ ಅವರಿಗೆ ಕೊಡಬೇಕಾದಂಥದ್ದನ್ನು ಕೊಡಬೇಕಾಗುತ್ತದೆ.

ಶ್ರೀ ಕೆ. ಎನ್. ನಾಗೇಗೌಡ :- ನಿಮ್ಮ ಪ್ರಪೋಜಲ್ ಬಹಳ ಚೆನ್ನಾಗಿ ಇದೆ. ಇದನ್ನು ಆಲಮಟ್ಟಿ ಪ್ರಪೋಜಲ್‌ಗೆ ಅಡಾಪ್ಟ್ ಮಾಡಿ 5 ಲೀಫ್ಟ್ ಇರೀಗೇಷನ್‌ನ್ನೂ ನಾವು ಕೈಗೆ ಎತ್ತಿಕೊಂಡಿದ್ದೇವೆ. ಅದೇ ರೀತಿ ಎಲ್ಲೆಲ್ಲಿ ಸಬ್‌ಮರ್ಜ್ ಆಗುವಂತಹ ಏರಿಯಾ ಇದೆ ಅಲ್ಲಗೆ ತಾವು ಹೇಳಿದ ಹಾಗೆ ರೀಜನರೇಟ್ ಆಗುತ್ತದೆ. ನಾವು ಎಷ್ಟು ನೀರು ಕೊಡುತ್ತೇವೆ ಅಷ್ಟು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇದನ್ನು ನಾವು ಡಬ್ಲ್ಯೂ.ಆರ್.ಡಿ.ಗೆ ರೇಫರ್ ಮಾಡಿ ಎಕ್ಸಾಮಿನ್ ಮಾಡಿಸುತ್ತೇವೆ.

(ಊ) ಫೋನ್ ಕದ್ದಾಲಿಕೆ ನಡೆದಿದೆ ಎನ್ನುವ ವಿಷಯ ಕುರಿತು.

+ **ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) :-** ಮಾನ್ಯ ಅಧ್ಯಕ್ಷರೇ, ಇವತ್ತು ಕೊನೆಗೆ ನಾನು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಇದು ಸಾರ್ವಜನಿಕ ಮಹತ್ವವಾದಂತಹ ಪ್ರಶ್ನೆ ಕೂಡ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಅಥವಾ ಗೃಹ ಮಂತ್ರಿಗಳು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ, ಬಹುಶಃ ಅವರು ಇದಕ್ಕೆ ಉತ್ತರವನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಫೋನ್ ಕದ್ದಾಲಿಕೆ ನಡೆದಿದೆ ಎನ್ನುವಂಥಾದ್ದು ವರ್ತಮಾನದಿಂದ ಗೊತ್ತಾಗಿದೆ. ಇದು ಇವತ್ತಿನದಲ್ಲ ಹಿಂದೆಯೂ ಕೂಡ ಈ ಮನೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಹಿಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಪ್ರಸ್ತಾಪವಾಗಿತ್ತು, ಮಾನ್ಯ ಬೊಮ್ಮಾಯಿಯವರ ಕಾಲದಲ್ಲಿ ಮತ್ತು ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ ಪ್ರಸ್ತಾಪವಾಗಿತ್ತು. ಹೀಗೆ ಅನೇಕ ಕಾಲದಲ್ಲಿಯೂ ಕೂಡ ಸಮಯಾನುಸಾರವಾಗಿ ಸದನದಲ್ಲಿ ಈ ರೀತಿಯಾಗಿ